ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್‌ವಾರು ಕಾಮಗಾರಿ ಸ್ಥಾಯಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ

ವಿಷಯ:–2017–18 ನೇ ಸಾಲಿನ ಆಯವ್ಯಯ ವಲಯದ ವಾರ್ಡ್ ಸಂಖ್ಯೆ:05 (ಜಕ್ಕೂರ್) ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ ಪಿ–1771 (**POW- Zonal Works**) ಅಡಿ ಪ್ರಸ್ತಾಪಿಸಿದ ತುರ್ತು ಕಾಮಗಾರಿಯಾದ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೇ॥ಕೆ.ಆರ್.ಐ.ಡಿ.ಎಲ್ ಸಂಸ್ಥೆರವರಿಗೆ ವಹಿಸಿಕೊಡುವ ಬಗ್ಗೆ.

ಉಲ್ಲೇಖ:–(1) ಸ್ಥಾಯಿ ಸಮಿತಿ ನಡುವಳಿಗಳ ಸಂಖ್ಯೆ:ವಾಕಾಸ್ಥಾಸ/690/2017–18, ದಿ:03–01–2018

(2)ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ ಆದೇಶ ಸಂಖ್ಯೆ:ವಿ.ಆ.(ಯೋ)/ಪಿ.ಆರ್/1562/2018–19, ದಿ:20–09–2018

(3) ಮಾನ್ಯ ಆಯುಕ್ತರು ರವರ ಆದೇಶ ಸಂ:ಪಿಎಸ್‌ಆರ್(ಜಿ)/ಪಿಆರ್/3945/18–19 ದಿ:05–11–2018

* * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ಕಾ.ಪಾ.ಅ (ಬ್ಯಾಟರಾಯನಪುರ ವಿಭಾಗ) ರವರ ವ್ಯಾಪ್ತಿಯ ಸಂಖ್ಯೆ:05 (ಜಕ್ಕೂರ್) ಲೆಕ್ಕ ಶೀರ್ಷಿಕೆ ಪಿ–1771 (**POW- Zonal Works**) ಅಡಿ ಪ್ರಸ್ತಾಪಿಸಿದ ಕಾಮಗಾರಿಯ ಕ್ರಿಯಾ ಯೋಜನೆಗೆ ಮೇಲ್ಕಂಡ ಉಲ್ಲೇಖ (1) ರಲ್ಲಿ ವಾರ್ಡ್ ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿಯವರು ಅನುಮೋದನೆ ನೀಡಿರುತ್ತಾರೆ. ಅನುಮೋದಿತ ಕಾಮಗಾರಿಯಲ್ಲಿ ಸದರಿ ವಾರ್ಡ್‌ನ ರಸ್ತೆ ಗುಂಡಿ ಮುಚ್ಚುವರ ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.

Sl No	Name of work	Head of A/c	Job Code No	Est Cost (Rs. in Lakhs)
1	Pothole filling to road in ward no.05(Jakkur), Byatrayanapura sub-division	P-1771	05-18-000068	30.00

ಮೇಲ್ಕಾಣಿಸಿದ ಕಾಮಗಾರಿಯನ್ನು ಘನ ಉಚ್ಚ ನ್ಯಾಯಾಲಯದಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆ ಗುಂಡಿಗಳ ಬಗ್ಗೆ ಸಾರ್ವಜನಿಕರ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಯುತ್ತಿದ್ದು, ಘನ ನ್ಯಾಯಾಲಯವು ದಿ:19–10–2018 ಮತ್ತು 20–10–2018 ರಂದು ಸುಧೀರ್ಘವಾಗಿ ವಿಚಾರಣೆ ನಡೆಸಿ ಘನ ನ್ಯಾಯಾಲಯವು ಎಲ್ಲಾ 198 ವಾರ್ಡ್‌ಗಳಲ್ಲಿ ಹಾಲಿ ಇರುವ ಮತ್ತು ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಲು ಕ್ರಮವಹಿಸಲು ಆದೇಶ ನೀಡಿರುತ್ತಾರೆ. ಮುಂದುವರೆದಂತೆ ಮೇಲ್ಕಂಡ ಉಲ್ಲೇಖ (2) ರ ಅಡಿಯಲ್ಲಿ ಈ ಕಛೇರಿಯಿಂದ ಆಂತರಿಕ ಕಛೇರಿ ಟಿಪ್ಪಣಿ ಹೊರಡಿಸಿ ಪಾಲಿಕೆ ಪ್ರತಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಹಾಲಿ ಇರುವ ಮತ್ತು ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಿ ಹಾಗೂ ಯಾವುದೇ ಗುಂಡಿ ಮುಚ್ಚುವ ಕಾರ್ಯವು ಬಾಕಿ ಇರುವುದಿಲ್ಲವೆಂದು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತ್ರರು ರವರು ದೃಢೀಕರಣ ಪತ್ರ ನೀಡಲು ಸೂಚಿಸಲಾಗಿರುತ್ತದೆ.

ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ಮುಖ್ಯ ಅಭಿಯಂತರರು (ದಕ್ಷಿಣ) ರವರ ಶಿಫಾರಸ್ಸಿನಂತೆ ಮೇಲ್ಕಂಡ ಕಾಮಗಾರಿಯನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ಅಡಿ ಕಲಂ 4(ಜಿ) ಅಡಿ ವಿನಾಯಿತಿ ನಿರೀಕ್ಷಿಸಿ ಸದರಿ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆರವರಿಗೆ ವಹಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿದ್ದು, ಸದರಿ ಪ್ರಸ್ತಾವನೆಗೆ ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಒಪ್ಪಿಗೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ–12/2018, ದಿನಾಂಕ: 06–04–2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್.– ಹಿಂದಿನ ಕೆ.ಎಲ್.ಎ.ಸಿ.) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ –

1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:-1075/18-19, ದಿ:11-07-2018 ರಂತೆ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗಧಿ ಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ॥ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ಈ ಕೆಳಕಂಡ ಅಂಶಕ್ಕೆ ಸೂಕ್ತ ನಿರ್ಣಯ ಕೋರಿ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

(1)ವಾರ್ಡ್ ಸಂಖ್ಯೆ:05, ಜಕ್ಕೂರ್ ವಾರ್ಡ್ (ಬ್ಯಾಟರಾಯನಪುರ ವಿಭಾಗ) ರಲ್ಲಿ ಮೇಲ್ಕಾಣಿಸಿದಂತೆ ಪ್ರಸ್ತಾಪಿಸಿದ ಕಾಮಗಾರಿಯ ಅಂದಾಜು ಮೊತ್ತವಾದ ರೂ.30.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ ಕಾಮಗಾರಿಯ ಪೂರ್ಣಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿದೆ.

ಪ್ರಧಾನ ಅಭಿಯಂತರರು (ಪ್ರಭಾರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ